<u>ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಯಲಬುರ್ಗಾ</u>

ಓ.ಎಸ್.ನಂ. **459/2025**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ಪಿಡಬ್ಲೂ**(02)**

| | |
|---|---|
| ಸಾಕ್ಷಿಯ ಹೆಸರು | ಉಮೇಶ |
| ಗಂಡನ/ತಂದೆಯ ಹೆಸರು | ಮುತ್ತಪ್ಪ ರಾಥೋಡ್ |
| ವಯಸ್ಸು | 40 ವರ್ಷ |
| ಉದ್ಯೋಗ | ಕೂಲಿ ಕೆಲಸ |
| ವಾಸ ಸ್ಥಳ | ಗಜೇಂದ್ರಗಡಾ ಜಿಃ ಗದಗ |

( ದಿನಾಂಕಃ **10-06-2026.** ಸಾಕ್ಷಿದಾರರನ್ನು ಪ್ರಮಾಣೀಕರಿಸಲಾಯಿತು.)

ಮುಖ್ಯ ವಿಚಾರಣೆಃ ವಾದಿಯ ಪರ ಶ್ರೀ ಎಸ್ ಬಿ ಹೆಚ್ ವಕೀಲರಿಂದಃ

ನಾನು ಸಾಕ್ಷಿ ಇದ್ದು, ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಹಾಜರುಪಡಿಸುತ್ತಿದ್ದೇನೆ. ಅದರಲ್ಲಿ ಬರೆದ ಸಂಗತಿಗಳು ನಿಜ ಇರುತ್ತವೆ. ಅದರ ಮೇಲೆ ನನ್ನ ಸಹಿ ಇರುತ್ತದೆ. ಆದ್ದರಿಂದ ಪ್ರಮಾಣಪತ್ರದಲ್ಲಿನ ವಿಷಯಗಳನ್ನು ನನ್ನ ಮುಖ್ಯ ವಿಚಾರಣೆ ಅಂತಾ ಪರಿಗಣಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಈಗ ನಾನು ನೋಡುತ್ತಿರುವ ನಿಪಿ-1 ಖರೀದಿ ವಚನ ಪತ್ರವಾಗಿರುತ್ತದೆ. ಅದಕ್ಕೆ ನಾನು ಮತ್ತು ಗಿರಿಯಪ್ಪ ಸಾಕ್ಷಿಯಾಗಿ ವಾದಿ ಮತ್ತು ಪ್ರತಿವಾದಿಯರ ಸಮಕ್ಷಮ ಸಹಿ ಮಾಡಿದ್ದೇವೆ. ಈಗ ನಾನು ನೋಡುತ್ತಿರುವ ನಿಪಿ-1 (ಬಿ) ನನ್ನ ಸಹಿ ಆಗಿರುತ್ತದೆ. ನಿಪಿ-1 ಕ್ಕೆ ಪ್ರತಿವಾದಿ ಹೆಬ್ಬಿಟ್ಟಿನ ಗುರುತು ಹಾಕಿರುತ್ತಾರೆ.

**(ಪಾಟೀಸವಾಲುಃ ಪ್ರತಿವಾದಿಯರು ಏಕಪಕ್ಷೀಯರಾಗಿರುತ್ತಾರೆ. ಆ ಕಾರಣ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)**

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ. ಕೆ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಯಲಬುರ್ಗಾ.**

ಓ.ಎಸ್.ನಂ. **459/2025**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ಪಿಡಬ್ಲೂ(01)

| | |
|---|---|
| ಸಾಕ್ಷಿಯ ಹೆಸರು | ಕುಮಾರ |
| ಗಂಡನ/ತಂದೆಯ ಹೆಸರು | ಅಂದಪ್ಪ |
| ವಯಸ್ಸು | 46 ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸ ಸ್ಥಳ | ಗಜೇಂದ್ರಗಡಾ |

( ದಿನಾಂಕಃ **10–06–2026.** ಸಾಕ್ಷಿದಾರರನ್ನು ಪ್ರಮಾಣೀಕರಿಸಲಾಯಿತು.)

ಮುಖ್ಯ ವಿಚಾರಣೆಃ ವಾದಿಯ ಪರ ಶ್ರೀ ವಕೀಲರಿಂದಃ

ನಾನು ಸಾಕ್ಷಿ ಇದ್ದು, ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಹಾಜರುಪಡಿಸುತ್ತಿದ್ದೇನೆ. ಅದರಲ್ಲಿ ಬರೆದ ಸಂಗತಿಗಳು ನಿಜ ಇರುತ್ತವೆ. ಅದರ ಮೇಲೆ ನನ್ನ ಸಹಿ ಇರುತ್ತದೆ. ಆದ್ದರಿಂದ ಪ್ರಮಾಣಪತ್ರದಲ್ಲಿನ ವಿಷಯಗಳನ್ನು ನನ್ನ ಮುಖ್ಯ ವಿಚಾರಣೆ ಅಂತಾ ಪರಿಗಣಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಈ ದಾವೆಗೆ ಸಂಬಂಧಿಸಿದಂತೆ ಹಾಜರುಪಡಿಸಿದ ದಾಖಲೆಗಳನ್ನು ಈ ಕೆಳಗಿನಂತೆ ಗುರುತಿಸಲಾಯಿತು.

ಅಸಲು ನೊಂದಾಯಿತ ಖರೀದಿ ವಚನ ಪತ್ರವನ್ನು ನಿಪಿ-1 ಎಂದು, ನಿಪಿ-1 ರ ಪ್ರತಿಪುಟಕ್ಕೂ ಪಾರವ್ವರವರು ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ. ನಿಪಿ-1 ಕ್ಕೆ ಸಾಕ್ಷಿದಾರರಾಗಿ ಗಿರಿಯಪ್ಪ ಮತ್ತು ಉಮೇಶ ರಾಥೋಡ್ ರವರು ನನ್ನ ಮತ್ತು ಪ್ರತಿವಾದಿಯ ಸಮಕ್ಷಮ ಸಹಿ ಮಾಡಿರುತ್ತಾರೆ. ಸದರಿ ಅವರ ಸಹಿಗಳನ್ನು ನೋಡಿದರೆ ಗುರುತಿಸಿರುತ್ತೇನೆ. ಈಗ ನಾನು ನೋಡುತ್ತಿರುವ ಸಹಿ ಗಿರಿಯಪ್ಪ ಮತ್ತು ಉಮೇಶ ರಾಥೋಡರವರ ಸಹಿ ಆಗಿರುತ್ತದೆ. ಸದರಿ ಸಹಿಗಳನ್ನು ಕ್ರಮವಾಗಿ ನಿಪಿ-1(ಎ) ಮತ್ತು 1(ಬಿ) ಎಂದು ಗುರುತಿಸಲಾಯಿತು. ನಿಪಿ-1 ನ್ನು ಶರಣಪ್ಪ ಬಸಪ್ಪರವರು ತಯಾರು ಮಾಡಿ ಪತ್ರಬರಹಗಾರರಾಗಿ ಸಹಿ ಮಾಡಿರುತ್ತಾರೆ. ಅವರ ಸಹಿಯನ್ನು ನೋಡಿದರೆ

**6** ಓ.ಎಸ್.ನಂ. **459/2025**

ಪಿಡಬ್ಲೂ(01)

ಗುರುತಿಸುತ್ತೇನೆ. ಈಗ ನಾನು ನೋಡುತ್ತಿರುವ ಸಹಿ ಶರಣಪ್ಪ ಬಸಪ್ಪರವರ ಸಹಿ ಆಗಿರುತ್ತದೆ. ಸದರಿ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಗಣಕಿಕೃತ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-2 ಎಂದು ಗುರುತಿಸಲಾಯಿತು. ದಿನಾಂಕಃ16-01-2025 ರಂದು ವಕೀಲರ ಮೂಲಕ ಪ್ರತಿವಾದಿಗೆ ಕಳುಹಿಸಿದ ನೋಟಿಸಿನ ಕಛೇರಿ ಪ್ರತಿಯನ್ನು ಹಾಜುರಪಡಿಸಿದ್ದು, ಅದನ್ನು ನಿಪಿ-3 ಎಂದು, ಅಂಚೆ ರಶೀದಿಯನ್ನು ನಿಪಿ-4 ಎಂದು, ಅಂಚೆ ಸ್ವೀಕೃತಿಯನ್ನು ನಿಪಿ-5 ಎಂದು ಗುರುತಿಸಲಾಯಿತು. ದಿನಾಂಕಃ21-04-2025 ರಂದು ವಕೀಲರ ಮೂಲಕ ಪ್ರತಿವಾದಿಗೆ ಕಳುಹಿಸಿದ ನೋಟಿಸಿನ ಕಛೇರಿ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-6 ಎಂದು, ಅಂಚೆ ರಶೀದಿಯನ್ನು ನಿಪಿ-7 ಎಂದು, ಅಂಚೆ ಲಕೋಟೆಯ ಮೂಲಕ ಕಳಹಿಸಿದ ನೋಟೀಸು ಜಾರಿಯಾಗದೇ ಹಿಂತಿರುಗಿದ್ದು, ಸದರಿ ಅಂಚೆ ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ತೆಗೆದು ನೋಡಿದಾಗ ಅಂಚೆ ಲಕೋಟೆಯ ಒಳಗೆ ದಿನಾಂಕಃ 19-04-2025 ಎಂದು ನಮೂದು ಮಾಡಿದ ನೋಟಿಸು ಇರುತ್ತದೆ, ಅಂಚೆ ಲಕೋಟೆಯನ್ನು ನಿಪಿ-8 ಎಂದು, ನೋಟೀಸನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. 2025-26 ನೇ ಸಾಲಿನ ಗಣಕಿಕೃತ ಪಹಣಿ ಪತ್ರಿಕೆಯನ್ನು ನಿಪಿ-9 ಎಂದು ಗುರುತಿಸಲಾಯಿತು.

(ಪಾಟೀಸವಾಲುಃ ಪ್ರತಿವಾದಿಯರು ಏಕಪಕ್ಷೀಯರಾಗಿರುತ್ತಾರೆ. ಆ ಕಾರಣ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ. ಕೆ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಯಲಬುರ್ಗಾ.**